ನಂದಾದೀಪ

# ಜಯಂತ್ ಮಹಾಪಾತ್ರ

## ಭಾರತೀಯ ಇಂಗ್ಲಿಷ್ ಕಾವ್ಯದ ತಾರೆ




ಮೀನಾ ಮೈಸೂರು

ಕಲೆ: ವಿನ್ಯಾಸ ಬಡಿಗೇರ


ಒರಿಸ್ಸಾದ ಜಯಂತ್ ಮಹಾಪಾತ್ರ (ಅ. 22, 1928 – ಆ. 27, 2023) ಭಾರತೀಯ ಇಂಗ್ಲಿಷ್ ಸಾಹಿತ್ಯದ ಪ್ರಮುಖ ಕವಿಗಳಲ್ಲೊಬ್ಬರು. ಇತ್ತೀಚೆಗೆ ನಿಧನರಾದ ಜಯಂತ್‌ರ ಕುರಿತ ಆರ್ದ್ರ ನೆನಪುಗಳ ಪುಟ್ಟ ಟಿಪ್ಪಣಿ.



ಅದು 1985ರ ಮೇ ತಿಂಗಳ 6ನೇ ತಾರೀಖು. ಮೈಸೂರಿನ 'ಧ್ವನ್ಯಾಲೋಕ'ದಲ್ಲಿ 'ಪೊಯಿಟ್ರಿ: ಕ್ಲೈಮೇಟ್ ಫಾರ್ ರಿನ್ಯೂವಲ್' ಎನ್ನುವ ವಿಷಯದ ಕುರಿತು ಉಪನ್ಯಾಸವಿತ್ತು. ಉಪನ್ಯಾಸಕಾರರಾಗಿ ಬಂದಿದ್ದವರು, ದೂರದ ಒರಿಸ್ಸಾ ರಾಜ್ಯದ ಕಟಕ್‌ನ ರವೆನ್ಷಾ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಜಯಂತ್ ಮಹಾಪಾತ್ರ.

ಜಯಂತ್ ಮಹಾಪಾತ್ರ ಅವರ ಬಗ್ಗೆ ನನಗೆ ಹೇಳಿದ್ದವರು ನನ್ನ ಪ್ರೀತಿಯ ಕಥೆಗಾರ ಶಾಂತಿನಾಥ ದೇಸಾಯಿ. ಜಯಂತ್ ಅವರಿಗೂ ನನ್ನ ವಿಷಯ ಹೇಳಿದ್ದರಂತೆ. ಹಾಗಾಗಿ 1983ರಲ್ಲಿ ಒಂದು ದಿನ ಅಂಚೆ ಮೂಲಕ 'ಎ ರೇನ್ ಆಫ್ ರಿಟ್ಸ್' ಕವನ ಸಂಕಲನ ಬಂತು. ಅದರಲ್ಲಿ ಪುಟ್ಟದೊಂದು ಟಿಪ್ಪಣಿ: 'ಶಾಂತಿನಾಥ ದೇಸಾಯಿ ಹೇಳಿದ್ದರಿಂದ ಈ ಸಂಕಲನ ಕಳುಹಿಸುತ್ತಿರುವೆ. ಹಿಯರ್ ಇಸ್ ದ ಪಾಯಿಂಟ್‌ಲೆಸ್ ಬುಕ್ ಫ್ರಮ್ ಎ ಸ್ಕಾಟರ್ಡ್ ಬ್ರೇನ್ಡ್ ಪೊಯೆಟ್'.

ಪುಸ್ತಕ ಮತ್ತು ಅವರ ಕೈ ಬರಹ